## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಕೆ ಮಹೇಶ್ ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇತಮಂಗಲ ಗ್ರಾಮ ಪಂಚಾಯತಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು – ಆದೇಶ.

**ಓದಲಾಗಿದೆ:**
1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ–2880/2016/ಎಆರ್‌ಇ–6, ದಿನಾಂಕ: 10–11–2017.
2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ ಬಿಡಿ–2880/2016/ಎಆರ್‌ಇ–6, ದಿನಾಂಕ: 07–11–2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ:10–11–2017 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಕೆ ಮಹೇಶ್ ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇತಮಂಗಲ ಗ್ರಾಮ ಪಂಚಾಯತಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಸಾರ್ವಜನಿಕ ನೌಕರರಾಗಿ ಶ್ರೀ ವಿಜಯ ಕುಮಾರ್ ಬಿನ್ ಕೃಷ್ಣಪ್ಪ, ವಾಟರ್ ವರ್ಕ್ಸ್ ಕಾಲೋನಿ, ಬೇತಮಂಗಲ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ಕೆಲಸದ ಸಂಬಂಧ ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ತಿಳಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರಡಿಯಲ್ಲಿ ಪದತ್ತವಿರುವ ಅಧಿಕಾರ ಚಲಾಯಿಸಿ, ಎದುರುದಾರರ ವಿರುದ್ಧ ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಲಾಗಿದೆ.

**ಪ್ರಕರಣದ ಸಂಕ್ಷಿಪ್ತ ಸಾರಾಂಶ :**

(ಅ) ದೂರುದಾರರಂತೆ: ದೂರುದಾರರ ಪಿತ್ರಾರ್ಜಿತ ಆಸ್ತಿ ಬೇತಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಸ.ನಂ 528 ರಲ್ಲಿ 3 ನಿವೇಶನಗಳಿದ್ದು, ಆ ಪೈಕಿ 17*55 ಅಡಿಗಳ ನಿವೇಶನವನ್ನು ಇ–ಖಾತೆ ಮಾಡಿಸಲು ದಿ:18.08.2015 ರಂದು ಬೇತಮಂಗಲ ಗ್ರಾಮ ಪಂಚಾಯಿತಿಗೆ ಅರ್ಜಿ ನೀಡಿದ್ದು, ಅವರು ಕೆಲವು ದಾಖಲೆಗಳನ್ನು ಕೇಳಿದ್ದರಿಂದ ದೂರುದಾರರು ಆ ಸೈಟಿಗೆ ಸಂಬಂಧಿಸಿದ ದಾಖಲಾತಿ ಮತ್ತು ವಂಶವೃಕ್ಷವನ್ನು ನೀಡಿದ್ದರ ಮೇರೆಗೆ ದಿ:14.12.2015 ರಂದು ಬೇತಮಂಗಲ ಕಾರ್ಯದರ್ಶಿ ಶ್ರೀ ವೆಂಕಟೇಶ್ ರವರು ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತಾರೆ. ನಂತರ ದಿ:11.01.2016 ರಂದು ಪಂಚಾಯಿತಿಗೆ ಭೇಟಿ ಮಾಡಿದಾಗ ತೆರಿಗೆ ರೂ. 1,350/–ಗಳನ್ನು ಪಾವತಿಸುವಂತೆ ತಿಳಿಸಿದ್ದು, ದೂರುದಾರರು ಅದೇ ದಿನ ರೂ. 1,350/–ಗಳ ತೆರಿಗೆ ಪಾವತಿಸಿದ್ದು, ನಂತರ ಇ–ಖಾತೆ ನೀಡಲು ಎದುರುದಾರರು ರೂ. 70,000/–ಗಳನ್ನು ನೀಡುವಂತೆ ಲಂಚಕ್ಕೆ ಒತ್ತಾಯಿಸಿರುತ್ತಾರೆ.

(ಆ) ಅದಕ್ಕೆ ದೂರುದಾರರು, ಈಗ ಅಷ್ಟು ಹಣ ತನ್ನಲ್ಲಿ ಇಲ್ಲವೆಂದು ತಿಳಿಸಿದಾಗ, ಇ–ಖಾತೆ ನಮೂನೆ –11(ಬಿ) ರ ನಕಲಿ ಪ್ರತಿಯನ್ನು ನೀಡಿ ದುಡ್ಡು ಕೊಟ್ಟ ಮೇಲೆ ಅಸಲಿ ಪ್ರತಿಯನ್ನು ನೀಡುವುದಾಗಿ ಎದುರುದಾರರು ತಿಳಿಸಿರುತ್ತೀರಿ.

(ಇ) ಸದರಿ ಇ–ಖಾತೆಯ ನಕಲು ಪ್ರತಿಯನ್ನು ನೋಡಿದಾಗ, ಅದರ ಕೆಳಗೆ ಷರಾದಲ್ಲಿ "No sale deed. Electricity Bill are available prior to 14.06.2013" ಎಂದು ನಮೂದಿಸಿದ್ದು, ಆ ಬಗ್ಗೆ ದೂರುದಾರರು ಎದುರುದಾರರನ್ನು ವಿಚಾರ ಮಾಡಲಾಗಿ "ನೀನು ಹಣ ನೀಡಿದ ಮೇಲೆ ಆ ಷರಾವನ್ನು ತೆಗೆದುಹಾಕಿ ಅಸಲಿ ಪತ್ರವನ್ನು ನೀಡುವುದಾಗಿ ತಿಳಿಸಿರುತ್ತಾರೆ".

2..

(ಈ) ದಿ:17.03.2016ರಂದು ತನ್ನ ಸೈಟು ಬೇರೆಯವರಿಗೆ ಮಾರಾಟ ಮಾಡಲು ನಮೂನೆ-11ಬಿ ಯನ್ನು ನೀಡುವಂತೆ ಕೇಳಲು ಹೋದಾಗ ಎದುರುದಾರರು ಪಂಚಾಯಿತಿ ಕಛೇರಿಯಲ್ಲಿ ಬೇರೆ ಫೋನಿನಲ್ಲಿ ಇತರರೊಂದಿಗೆ ಮಾತನಾಡುತ್ತಿದ್ದು, ದೂರುದಾರರಿಗೆ ರೂ. 70,000/-ಗಳನ್ನು ಕೊಡುವಂತೆ ಒಂದು ಕಾಗದದ ಮೇಲೆ ಬರೆದು ಸಂಜ್ಞೆ ಮಾಡಿರುತ್ತಾರೆ.

(ಉ) ನಂತರ ದೂರುದಾರರು ರೂ. 20,000/-ಗಳನ್ನು ಕೊಡುವುದಾಗಿ ಹೇಳಿದಾಗ, ಅದಕ್ಕೆ ಎದುರುದಾರರು ರೂ. 69,999/-ಗಳನ್ನು ಕೊಟ್ಟರೂ ಸಹ ತಾನು ಅಸಲು ಖಾತೆ ನೀಡುವುದಿಲ್ಲ. ತಾನು ಹೇಳಿದಷ್ಟು ಹಣ ನೀಡಿದರೆ ಮಾತ್ರ ಅಸಲು ಇ-ಖಾತೆಯನ್ನು ತಿದ್ದುಪಡಿಯೊಂದಿಗೆ ನೀಡುವುದಾಗಿ ಲಂಚಕ್ಕೆ ಒತ್ತಾಯಿಸಿರುತ್ತಾರೆ.

(ಊ) ಎದುರುದಾರರಿಗೆ ಲಂಚ ಕೊಡಲು ಇಷ್ಟವಿಲ್ಲದ ಕಾರಣ, ದೂರುದಾರರು, ದಿ:19.03.2016ರಂದು ಕೋಲಾರ ಲೋಕಾಯುಕ್ತ ಕಛೇರಿಯಲ್ಲಿ ಹಾಜರಾಗಿ ಎದುರುದಾರರ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ.

(ಋ) ಅಷ್ಟೆ ಅಲ್ಲದೆ. ದಿ:19.03.2016 ರಂದು ರೂ. 70,000/-ಗಳ ಲಂಚದ ಹಣವನ್ನು ದೂರುದಾರರಿಂದ ಎದುರುದಾರರು ಪಡೆದುಕೊಂಡಾಗ ಟ್ರ್ಯಾಪ್ ಆಗಿದ್ದು, ತನಿಖಾಧಿಕಾರಿಗಳು ಅದನ್ನು ಜಪ್ತಿ ಮಾಡಿದ್ದು ಕಂಡುಬರುತ್ತದೆ.

(ಎ) ಅಲ್ಲದೆ, ಸದರಿ ಸಮಯದಲ್ಲಿ ಎದುರುದಾರರ ಪ್ಯಾಂಟಿನ ಬಲ ಜೇಬಿನಲ್ಲಿ ರೂ. 41,010/- ಇದ್ದು, ಸದರಿ ಹಣದ ಬಗ್ಗೆ ಎದುರುದಾರರನ್ನು ಕೇಳಿದಾಗ ಸಮಂಜಸವಾದ ಉತ್ತರ ನೀಡದೇ ಇರುವುದರಿಂದ ಅಕ್ರಮ ಹಣವೆಂದು ಪರಿಗಣಿಸಿ ಸದರಿ ಹಣವನ್ನು ಪಂಚನಾಮೆಯ ಮುಖಾಂತರ ಅಮಾನತ್ತು ಪಡಿಸಿಕೊಂಡಿರುವುದು ಕಂಡುಬರುತ್ತದೆ.

(ಏ) ಎದುರುದಾರರು ಸದರಿ ದಿವಸ ಆ(ಲಂಚದ) ಹಣದ ಸ್ವಾಧೀನಾನುಭವದಲ್ಲಿರುವಾಗ, ತನಿಖಾಧಿಕಾರಿಗಳು ಆ ಹಣದ ಸಹಿತ ಎದುರುದಾರರನ್ನು ಹಿಡಿದಿದ್ದಾರೆ.

(ಐ) ಅದಲ್ಲದೇ, ಸದರಿ ದಿನಾಂಕದಂದು ಆ (ಲಂಚದ) ಹಣವು ಎದುರುದಾರರ ಸ್ವಾಧೀನದಲ್ಲಿ ಹೇಗೆ ಇತ್ತು ಎಂದು ತನಿಖಾಧಿಕಾರಿಗಳು ಪ್ರಶ್ನಿಸಿದಾಗ, ಅದಕ್ಕೆ ಎದುರುದಾರರು ಸಮಾಧಾನಕಾರಕ ಅಥವಾ ಸೂಕ್ತ ಉತ್ತರ ಕೊಡಲು ವಿಫಲರಾಗಿದ್ದಾರೆ.

(ಒ) ಆ ನಂತರ, ಆ ಹಣವನ್ನು ಎದುರುದಾರರಿಂದ ತನಿಖಾಧಿಕಾರಿಗಳು ಪಂಚನಾಮೆಯಂತೆ ವಶಪಡಿಸಿಕೊಂಡಿರುತ್ತಾರೆ.

(ಓ) ದೂರುದಾರರ, ಪಂಚರ ಹಾಗೂ ಇತರ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳು ಪ್ರಕರಣದಲ್ಲಿ ಹಾಜರು ಮಾಡಿದ್ದು, ಅವು ಕೂಡ ಎದುರುದಾರರು ಪದೇ ಪದೇ ದುರ್ವರ್ತನೆ/ದುರ್ನಡತೆ ಎಸಗಿರುವುದನ್ನು ತೋರಿಸುತ್ತದೆ.

ಆರೋಪ ಪಟ್ಟಿಯಲ್ಲಿ ಕಾಣಿಸಿರುವ ಸಂಗ್ರಹವಾದ ಆಧಾರಗಳಿಂದಾಗಿ, ಮೇಲ್ನೋಟಕ್ಕೆ 'ಎದುರುದಾರರ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 'ಎದುರುದಾರರು' ಸರ್ಕಾರಿ ಸೇವಕರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

ನಂತರ, ಎದುರುದಾರರಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ವರದಿ ಕಳುಹಿಸಬಾರದು? ಎಂಬ ಬಗ್ಗೆ ಕಾರಣಗಳನ್ನು ಕೇಳಲಾಯಿತು. 'ಎದುರುದಾರರು' ತನಿಖಾ ವರದಿಯಲ್ಲಿ ಕಾಣಿಸಿದ ಸಂಗತಿಯನ್ನು ನಿರಾಕರಿಸಿ, ತಾನು ಓರ್ವ ಪ್ರಾಮಾಣಿಕ ಸರ್ಕಾರಿ ನೌಕರನಾಗಿದ್ದು, ತಾನು ತನ್ನ ಕರ್ತವ್ಯವನ್ನು ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಮಾಡಿರುತ್ತೇನೆಂದು, ತನ್ನ ವಿರುದ್ಧದ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿದ್ದಾರೆ. ಆದರೆ, ದೂರುದಾರರು ಆಕ್ಷೇಪಣೆಯಲ್ಲಿ ನೀಡಿರುವ ಕಾರಣಗಳು ಸೂಕ್ತ ಅಥವಾ ಸಮಾಧಾನಕಾರಕವಾಗಿರುವುದಿಲ್ಲ.

ಕಡತವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ತನಿಖೆ ಕಾಲಕ್ಕೆ ತನಿಖಾಧಿಕಾರಿಯವರು ಒಟ್ಟು 301 ದಾಖಲೆಗಳನ್ನು ಸಂದಾಯಿಸಿದ್ದು, 22 ಜನ ಸಾಕ್ಷಿದಾರರನ್ನು ತೋರಿಸಿರುತ್ತಾರೆ. ಸಾಕ್ಷಿದಾರರು ತಮ್ಮ ಹೇಳಿಕೆ ಕಾಲಕ್ಕೆ ಎದುರುದಾರರು ಎಸಗಿರುವ ಕೃತ್ಯದ ಬಗ್ಗೆ ವಿವರಿಸಿರುತ್ತಾರೆ. ಅವರ ಹೇಳಿಕೆಗಳು ಮೇಲ್ನೋಟಕ್ಕೆ ಎದುರುದಾರರು ಲಂಚ ತೆಗೆದುಕೊಂಡಿರುವುದನ್ನು ಸಾಬೀತುಪಡಿಸುತ್ತದೆ. ಅದಲ್ಲದೆ ಸೂಕ್ತ ದಾಖಲಾತಿಗಳು ಸಹ ಆ ವಿಚಾರದ ಬಗ್ಗೆ

ಸದರಿ ದಾಖಲೆಗಳ ಮತ್ತು ಸಾಕ್ಷಿ ಆಧಾರದಲ್ಲಿ ತನಿಖಾಧಿಕಾರಿಯವರು ಈಗಾಗಲೇ ಎದುರುದಾರರ ವಿರುದ್ಧ ಸಂಬಂಧಪಟ್ಟ ನ್ಯಾಯಾಲಯದಲ್ಲಿ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತಾರೆ. ಈ ಹಂತದಲ್ಲಿ ಸದರಿ ಸಾಕ್ಷ್ಯವನ್ನು ಅಲ್ಲಗಳೆಯುವಂತಹ ಯಾವುದೇ ಸಾಕ್ಷಿ ಆಧಾರಗಳನ್ನು ಎದುರುದಾರರು ತಮ್ಮ ತಕರಾರು ಜೊತೆ ಸಲ್ಲಿಸಿರುವುದಿಲ್ಲ.

ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, 'ಎದುರುದಾರರು' ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1) (i) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 'ಎದುರುದಾರರ' ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಶ್ರೀ ಕೆ ಮಹೇಶ್ ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇತಮಂಗಲ ಗ್ರಾಮ ಪಂಚಾಯತಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/839/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 08-12-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ ಮಹೇಶ್ ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇತಮಂಗಲ ಗ್ರಾಮ ಪಂಚಾಯತಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ 14-ಎ ರ ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 60 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)

4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಕೋಲಾರ, ಕೋಲಾರ ಜಿಲ್ಲೆ.

5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬಂಗಾರಪೇಟೆ, ಕೋಲಾರ ಜಿಲ್ಲೆ.

6) ಶ್ರೀ ಕೆ ಮಹೇಶ್ ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇತಮಂಗಲ ಗ್ರಾಮ ಪಂಚಾಯತಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ.

7) ಗಣಕ ಕೋಶ.

8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.